Journal of Research and Development
A Multidisciplinary International Level Referred and Double Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(A)| April-2026

Original Article

# ಕನ್ನಡ ಭಾಷೆ: ಇಂದಿನ ಸವಾಲುಗಳು

**ಕೃಷ್ಣೇಗೌಡ**
ಸಹಾಯಕ ಪ್ರಾಧ್ಯಾಪಕರು., ಕನ್ನಡ ವಿಭಾಗ,
ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು
krishnegowdakrish@gmail.com

**Manuscript ID**:
JRD -2026-180422
ISSN: 2230-9578
Volume 18
Issue 4(A)
Pp 105-108
April- 2026
**Submitted:** 24 Mar. 2026
**Revised:** 31 Mar. 2026
**Accepted:** 15 Apr. 2026
**Published:** 30 April. 2026

**ಸಾರಲೇಖ**

*ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮಹಾನ್ ಕೃತಿಗಳ ಸಂಪತ್ತಿದೆ. ತನ್ನದೇ ಆದ ಸರಳ,ಸುಂದರ,ಸಮೃದ್ಧವೂ ಆದ ಲಿಪಿಯಿದೆ. ಕನ್ನಡವನ್ನಾಡುವ ಜನರು ತಮ್ಮ ನೆಲವೆಂದು ಹೇಳಿಕೊಳ್ಳಬಲ್ಲ ಭೌಗೋಳಿಕ ಪರಿಸರವೂ ಇದೆ. ಶಾಸ್ತ್ರೀಯ ಸ್ಥಾನಮಾನವನ್ನೂ ಪಡೆದುಕೊಂಡಿದೆ. ಒಂದು ಭಾಷೆ ಉಳಿದು ಬೆಳೆಯಲು ಭಾಷೆಯ ಸಮೃದ್ಧಿ ಮತ್ತು ಶಕ್ತಿಯನ್ನು ಸಾಲದು. ಅದನ್ನು ಬಳಸುವ ಜನಗಳ ಮನೋವ್ಯಾಪಾರ, ಅಭಿರುಚಿ,ಅವಶ್ಯಕತೆಗಳು, ಬದಲಾಗುತ್ತಿರುವ ಜಾಗತಿಕ ವಿದ್ಯಾಮಾನಗಳು,ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳ ಹಾಗೂ ಸಾಮಾಜಿಕ ಮೌಲ್ಯಗಳು ಪರಿಣಾಮ ಬೀರುತ್ತದೆ.*

*ಈ ಭಾಷೆ ಜಾಗತೀಕರಣದ ಪ್ರಭಾವದಲ್ಲಿ ಅಳಿವಿನೆಡೆಗೆ ಸಾಗುತ್ತಿದೆಯೇ? ಈ ಭಾಷೆಯ ಹುಟ್ಟಿಗೆ ಸಾಕ್ಷಿಯಾಗದ ನಾವು ಭಾಷೆಯ ಅಳಿವಿಗೆ ಪ್ರತ್ಯಕ್ಷದರ್ಶಿಗಳಾಗುತ್ತಿದ್ದೇವಯೇ? ನಮ್ಮ ಮಾತ್ರ ನಮ್ಮಿಂದ, ನಮ್ಮ ದೈನಂದಿನ ಚಟುವಟಿಕೆಗಳಿಂದ, ನಮ್ಮ ಮನಸ್ಸಿನಿಂದ ದೂರ ಆಗುತ್ತಿದೆಯೇ? ಭಾಷೆಯ ಅಳಿವಿಗೆ ಕಾರಣವೇನು? ಉಳಿವಿಗಾಗಿ ಕೈಗೊಳ್ಳಬೇಕಾದ ಕ್ರಮಗಳೇನು? ಇವೆಲ್ಲಾ ಪ್ರಶ್ನೆಗಳ ಕುರಿತು ಚರ್ಚೆಯಾಗಲಿದೆ ಈ ಪ್ರಬಂಧ. ಆಗಾಧವಾದ ಸಾಹಿತ್ಯ ಶ್ರೀಮಂತಿಕೆಯನ್ನು ಹೊಂದಿರುವ ಕನ್ನಡ ಸಾಹಿತ್ಯದ ಅಳಿವು ಕನ್ನಡಿಗರ ಮಾನಾಭಿಮಾನದ ಪ್ರಶ್ನೆ. ಹುಚ್ಚು ಆವೇಶದಿಂದ ರಂಪಾಟದಿAದ ಭಾಷೆಯ ಉಳಿವು ಸಾಧ್ಯವಿಲ್ಲ. ಬೆಳೆಯುತ್ತಿರುವ ಯುಗದೊಡನೆ ಪೈಪೋಟಿ ನೀಡುವ ಮಟ್ಟಿಗೆ ಈ ಭಾಷೆಯನ್ನು ಬೆಳೆಸುವ ಹೊಣೆ ನಮ್ಮದಾಗಿದೆ. ವಿಜ್ಞಾನ, ತಂತ್ರಜ್ಞಾನದಲ್ಲಿ ಕನ್ನಡ ಬೆಳೆಯಬೇಕಿದೆ. ಈ ನಿಟ್ಟಿನಲ್ಲಿ ನಾವು ಮಾಡಬೇಕಾದ ಕರ್ಯಗಳ ಮೇಲೆ ಈ ಪ್ರಬಂಧ ಬೆಳಕು ಚೆಲ್ಲುವ ಪ್ರಯತ್ನ ಮಾಡಲಿದೆ.*

*ಮದರಾಸು, ಬೊಂಬಾಯಿ, ಆಂಧ್ರಪ್ರದೇಶ ಹೀಗೆ ಹರಿದು ಹಂಚಿ ಹೋಗಿದ್ದ ಕನ್ನಡಿಗರನ್ನು ಕರ್ನಾಟಕ ಏಕೀಕರಣದ ಮೂಲಕ ಒಂದಾಗಿಸಿದ ಮಹನೀಯರ ಪ್ರಯತ್ನವ ಸ್ಮರಿಸುತ್ತಾ ಕನ್ನಡ ಭಾಷೆಯನ್ನು ಒಗ್ಗಟ್ಟಿನಿಂದ ಉಳಿಸುವ ತುರ್ತು ಇಂದು ಒದಗಿದೆ. ಈ ತುರ್ತಿನ ಸಾಧಕ ಬಾಧಕಗಳನ್ನು ಈ ಪ್ರಬಂಧದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಭಾಷೆಯ ಅಳಿವು ಒಂದು ಸಂಸ್ಕೃತಿಯ ಅಳಿವು. ಸಂಸ್ಕೃತಿ ಅಳಿದರೆ ಆ ಜನಾಂಗವೇ ನಾಶವಾದಂತೆ. ಇದಕ್ಕೆ ಅವಕಾಶ ಕೊಡದಿರೋಣ ಎಂಬ ಹಂಬಲ ಈ ಪ್ರಬಂಧದಲ್ಲಿ ವ್ಯಕ್ತವಾಗಿದೆ.*

## ಕನ್ನಡ ಭಾಷೆ ಅಳಿವು-ಉಳಿವು

ಪೀಠಿಕೆ: ನಮ್ಮ ನಾಡು ಕನ್ನಡ ನಮ್ಮ ಭಾಷೆ ಕನ್ನಡ.ಕನ್ನಡಿಗರೆಲ್ಲ ವಿನಯವಂತರು ಎಲ್ಲವನ್ನೂ ಸಹಿಸುವಂತವರಾಗಿರುವರೆAದರೆ ತಪ್ಪಾಗಲಾರದು. ನಾನಾ ರಾಜ್ಯಗಳಿಂದ ಬೇರೆ ಬೇರೆ ಭಾಷೆಗಳನ್ನು ಆಡುವವರು ಕರ್ನಾಟಕಕ್ಕೆ ಬರುತ್ತಿದ್ದಾರೆ. ಪ್ರತಿದಿನ ಸಾವಿರಾರು ಜನ ಬರುವರೇನೋ ಅವರೆಲ್ಲರಿಗೂ ನಮ್ಮ ಭಾಷೆ ಕಲಿಸುವುದು ಬಿಟ್ಟು ಅವರ ಭಾಷೆಯಲ್ಲಿ ನಾವು ಅವರೊಡನೆ ವ್ಯವಹರಿಸುತ್ತೇವೆ. ಇಲ್ಲವಾದರೆ ಇಂಗ್ಲೀಷ್ ಭಾಷೆಯಲ್ಲಿ ಮೇಧಾವಿಗಳಂತೆ ಮಾತನಾಡುತ್ತಾ ನಮ್ಮನ ಸ್ವಂತಿಕೆಯನ್ನು ಮರೆತು ಇಂಗ್ಲೀಷ್ ಭಾಷೆಯ ಗುಲಾಮರಂತೆ ವರ್ತಿಸುತ್ತಿರುವ ನಮಗೆ ನಮ್ಮ ನೆಲ,ಜಲ,ಭಾಷೆಯ ಬಗೆಗಿರುವ ಅಭಿಮಾನ ಪ್ರಶ್ನಾರ್ಹವಾಗುವುದು. ನವೆಂಬರ್ ತಿಂಗಳು ಬಂತೆAದರೆ ಕನ್ನಡ ಕನ್ನಡ ಎಂದು ಬೊಬ್ಬಿಡುವ ನಾವು ಪ್ರತಿಯೊಂದು ದಿನ, ತಿಂಗಳು ,ವರುಷ ನಮ್ಮ ಭಾಷೆಯಲ್ಲಿಯೇ ಆದಷ್ಟು ವ್ಯವಹರಿಸುವುದನ್ನು ಕಲಿತರೆ ಕನ್ನಡ ಭಾಷೆಯ ಉಳಿವು ತಂತಾನೆ ಆಗುವುದು

**Creative Commons (CC BY-NC-SA 4.0)**
*This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.*

**Address for correspondence:**
*ಕೃಷ್ಣೇಗೌಡ ಸಹಾಯಕ ಪ್ರಾಧ್ಯಾಪಕರು., ಕನ್ನಡ ವಿಭಾಗ, ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು*

**How to cite this article:**
*ಕೃಷ್ಣೇಗೌಡ (2026). ಕನ್ನಡ ಭಾಷೆ: ಇಂದಿನ ಸವಾಲುಗಳು. Journal of research & development, 18(4(A)), 105–108.*
https://doi.org/10.5281/zenodo.20390405

Quick Response Code:
Website: https://jrdrvb.org/
DOI: 10.5281/zenodo.20390405
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(A)| April-2026

.ಏಕೆಂದರೆ ಭಾಷೆಯ ಉಧ್ಧಾರವಾಗುವುದು ಅದರ ನಿರಮತರ ಬಳಕೆಯಿಂದಲೆ ಹೊರತು ಇನ್ಯಾವ ಮಾರ್ಗದಿಂದಲೂ ಅಲ್ಲಕನ್ನಡ ಸಾಹಿತ್ಯ ಅಗಾಧವಾದ ಪರಿಧಿಯನ್ನು ಹೊಂದಿದೆ. ನಮ್ಮ ಆಡುಭಾಷೆಯಲ್ಲಿ ಓದುವ ,ಮಾತನಾಡುವ ಹವ್ಯಾಸ ಬೆಳೆಸಿಕೊಂಡರೆ ನಮ್ಮ ಭಾಷೆಯ ಉಳಿವಿನ ವಾತಾವರಣ ಸೃಷ್ಟಿಯಾಗುವುದು.ಕನ್ನಡ ನಾಡಿಗೆ ಅದರದೇ ಆದ ಚರಿತೆಯಿದೆ,ಇತಿಹಾಸವಿದೆ.ಹಿಂದಿನ ಕಾಲದಲ್ಲಿ ರಾಜಮಹಾರಾಜರು ಕನ್ನಡ ಭಾಷೆಯ ಬೆಳವಣಿಗೆಗೆ ತನ್ನದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಅನೇಕ ಕವಿಗಳು ಕನ್ನಡ ನಾಡನ್ನು ತಮ್ಮ ಕವಿತೆಗಳಲ್ಲಿ ಹಾಡಿ ಹೊಗಳಿದ್ದಾರೆ. ನಮ್ಮ ನಾಡಿನ ಐಶ್ವರ್ಯವನ್ನುಎತ್ತಿತೋರಿದ್ದಾರೆ. ಕನ್ನಡ ನಾಡು ಗಂಧದ ಬೀಡು ಎಂಬ ಪ್ರತೀತಿಯಿದೆ. ಆ ಗಂಧವನ್ನುಕನ್ನಡ ವಿದ್ವಾಂಸರು ಜಗತ್ತಿಗೆ ಸಾರಿದ್ದಾರೆ. ಬಸವಣ್ಣನವರ ವಚನಗಳನ್ನು ವಿದೇಶದಲ್ಲೂ ಓದುವವರಿದ್ದಾರೆ. ವಚನಕಾರರು, ದಾಸವರೇಣ್ಯರು, ಪಂಪ, ರನ್ನ ಪೊನ್ನ ಕುಮಾರವ್ಯಾಸರಂತಹ ಮಹಾಕವಿಗಳನ್ನುಕಂಡ ನಾಡು ನಮ್ಮದು.

**ಸಂಸ್ಕೃತಿಯ ವಾಹಕವಾಗಿ ಕನ್ನಡ;-**

ಭಾಷೆ ಬೆಳೆದರೆ ಸಂಸ್ಕೃತಿ ಬೆಳೆಯುತ್ತದೆ. ಕರ್ನಾಟಕದಲ್ಲಿ ಕನ್ನಡವನ್ನು ಅನೇಕ ಹಿರಿಯರು, ಗಣ್ಯರು, ಶ್ರೀಸಾಮಾನ್ಯರು, ಕವಿಗಳು, ಲೇಖಕರು, ಸಾಹಿತಿಗಳು ಕಟ್ಟಿ ಬೆಳೆಸಿದ್ದಾರೆ. ಕನ್ನಡದ ಬೆಳವಣಿಗೆಗಾಗಿ ಅಭಿವೃದ್ಧಿಗಾಗಿ ಹಲವರು ತ್ಯಾಗ ಬಲಿದಾನ, ಮಾಡಿದ್ದಾರೆ. ಹಿಂದಿನವರು ಮಾಡಿದ ಕನ್ನಡ ಕಟ್ಟುವ ಕೆಲಸವನ್ನು ಮುಂದುವರೆಸಿಕೊAಡು ಹೋಗಬೇಕು. ಭಾಷೆ ಬೆಳೆಯದೆ ಜನ ಬೆಳೆಯುವುದಿಲ್ಲ, ನಾಡು ಬೆಳೆಯುವುದಿಲ್ಲ, ಸಾಹಿತ್ಯವೂ ಬೆಳೆಯುವುದಿಲ್ಲ ಭಾಷೆ ಸಂಸ್ಕೃತಿಯನ್ನು ಬೆಳೆಸಿಕೊಳ್ಳದ ಜನಾಂಗ ಆಂತರಿಕ ಚೈತನ್ಯಕಳೆದುಕೊಳ್ಳುತ್ತದೆ. ಅಂತಹ ಜನಾಂಗದವರ ಬದುಕು ಬರಡಾಗುತ್ತಯದೆ.

ಕನ್ನಡ ಕೇವಲ ನುಡಿಯಲ್ಲ ಅದೊಂದು ಸನ್ಮಂತ್ರ, ಅಕ್ಷತ ಶಕ್ತಿ ಎಂದು ಕುವೆಂಪು ಹೇಳಿದರು. ಕನ್ನಡ ಭಾಷೆಯನ್ನು ಉಚ್ಚರಿಸುತ್ತಿದ್ದರೆ ನಾವು ರೋಮಾಂಚಿತರಾಗುತ್ತೇವೆ, ಮಂತ್ರಮುಗ್ಧರಾಗುತ್ತೇವೆ. ನಮ್ಮ ಅಭಿವ್ಯಕ್ತಿಗಳಿಗೆ ನಮ್ಮ ಭಾಷೆ ಸಮರ್ಥ ಮಾಧ್ಯಮವಾಗಿದೆ. ಪಂಪನಿಗಿAತ ಪೂರ್ವ ಕಾಲದಲ್ಲೂ, ಕವಿರಾಜಮಾರ್ಗಕ್ಕಿಂತಲೂ ಹಿಂದೆ ಕನ್ನಡದ ಗ್ರಂಥಗಳು ರಚನೆಯಾಗಿದ್ದವು ಎಂದು ಭಾಷಾ ತಜ್ಞರು ಹೇಳಿದ್ದಾರೆ. ಹೀಗೆ ಕನ್ನಡ ನುಡಿ ಪ್ರಾಚೀನ ಕಾಲದಿಂದ ಇಂದಿನವರೆಗೂ ವಿಕಸನಗೊಳ್ಳುತ್ತಾಬಂದಿರುವ ಇತಿಹಾಸ ರೋಚಕವಾಗಿದೆ.

ಕನ್ನಡ ಒಂದುಕಡೆ ಕವಿಗಳ ಕೊಡುಗೆ, ಇನ್ನೊಂದೆಡೆ ಜನಸಾಮಾನ್ಯರ ಕೊಡುಗೆಗಳು ಕಾರಣವಾಗಿ ಹೊಸ ವಿದ್ಯಮಾನಗಳಿಗೆ ತಕ್ಕಂತೆ ಈಗಲೂ ಬಲಿಷ್ಠವಾಗಿ ಬೆಳೆಯುತ್ತಿದೆ. ಕನ್ನಡಕ್ಕೆ ಇಷ್ಟೆಲ್ಲಾ ಭವ್ಯ ಇತಿಹಾಸ, ಸುವರ್ಣ ಪರಂಪರೆಗಳಿದ್ದರೂ ಕನ್ನಡ ಬಳಸುವಲ್ಲಿ, ಬೆಳೆಸುವಿಕೆಯಲ್ಲಿ ಹೆಚ್ಚಿನ ಉತ್ಸಾಹ ತೋರುತ್ತಿಲ್ಲ ಕರ್ನಾಟಕದ ಏಕೀಕರಣವಾಗಿ ೬೦ ವರ್ಷಗಳು ಕಳೆದರೂ ಸರಕಾರಿ ಆಡಳಿತದಲ್ಲಿ ಶೇ.೬೦ ರಷ್ಟಾದರೂ ಕನ್ನಡದ ಬಳಕೆ ಆಗುತ್ತಿದೆಯೇ? ಕನ್ನಡಕ್ಕೆ ಆಡಳಿತದಲ್ಲಿ ಪ್ರಥಮ ಸ್ಥಾನ ಸಿಕ್ಕಿದೆಯೇ? ವಿಧಾನಸೌಧದಲ್ಲಿ ಕನ್ನಡದ ದೀಪ ಬೆಳಗುತ್ತಿದೆಯೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರವಿಲ್ಲ

ಹೆಸರಾಯಿತು ಕರ್ನಾಟಕ ಆದರೇ ಆಡಳಿತದಲ್ಲಿ ಉಸಿರಾಯಿತೆ? ಕನ್ನಡದಲ್ಲಿ ಇಲ್ಲದ ಟಿಪ್ಪಣಿಗಳ ಕಡತಗಳನ್ನು ನೋಡುವುದಿಲ್ಲ, ಸಹಿ ಮಾಡುವುದಿಲ್ಲವೆಂದು ನಮ್ಮ ಜನಪ್ರತಿನಿಧಿಗಳು ದಿಟ್ಟತನದಿಂದ ವರ್ತಿಸಿದ್ದರೇ ಕನ್ನಡಕ್ಕೆ ಈ ದುಸ್ಥಿತಿ ಬರುತ್ತಿರಲಿಲ್ಲ, ರಾಜ್ಯ ಸರ್ಕಾರದ ಆಡಳಿತದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ನೀಡಬೇಕೆಂದು ರಾಜ್ಯ ಸರ್ಕಾರ ೪೦೦ ಸುತ್ತೋಲೆಗಳನ್ನು ಹೊರಡಿಸಿದ್ದರೂ ಈ ಆದೇಶಗಳು ಏಕೆ ಪರಿಣಾಮಕಾರಿ ಅನುಷ್ಠಾನವಾಗಿಲ್ಲ, ಹಾಗಾಗಿಯೇ ಪ್ರಮುಖ ಸಮಸ್ಯೆಗಳು ಹಾಗೆಯೇ ಉಳಿದಿವೆ. ಕಾವೇರಿಗಾಗಿ ಒಂದಾದ ಜನಪ್ರತಿನಿಧಿಗಳು ಕನ್ನಡ ಭಾಷೆಯ ವಿಷಯದಲ್ಲೂ ಇದೇರೀತಿಯ ಒಗ್ಗಟ್ಟುಪ್ರದರ್ಶಿಸಿದರೆ ಆಡಳಿತದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ಸಿಗಬಹುದು. ಶತಮಾನಗಳಿಂದ ಬದುಕಿರುವ ಭಾಷೆಯ ಜಯಮಾನ ಬದಲಾಗಬೇಕೆಂದು ನಾವು ಕನ್ನಡವನ್ನು ಕಂಗ್ಲೀಷ್ ಮಾಡಿರುವುದು ದುರಂತ.

ನಮ್ಮ ರಾಜಧಾನಿಯ ಲಕ್ಷಾಂತರ ಮಕ್ಕಳಿಗೆ ಕನ್ನಡ ಅಕ್ಷರ ಕಾಗುಣಿತವನ್ನು ತಪ್ಪಿಲ್ಲದೆ ಬರೆಯಲು ಬರುವುದಿಲ್ಲ, ರಾಜ್ಯದ ಉಳಿದ ನಗರ ಪ್ರದೇಶಗಳಲ್ಲೂ ಪರಿಸ್ಥಿತಿ ಇದ್ದಕ್ಕಿಂತ ಭಿನ್ನವಾಗಿಲ್ಲ, ಕರ್ನಾಟಕ ಏಕೀಕರಣವಾಗಿ ೬೦ ವರ್ಷಗಳ ಮೇಲಾದರೂ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಣ ಕ್ಷೇತ್ರಗಳಲ್ಲಿ ಕನ್ನಡ ಮಾಧ್ಯಮ ಇನ್ನೂ ಏಕೆ ಜಾರಿಯಾಗಿಲ್ಲ, ಈ ಸ್ಥಾನಮಾನಕ್ಕಾಗಿ ಇನ್ನೂ ಹೋರಾಟ ಚಳುವಳಿ ನಡೆಯುತ್ತಿದೆಂಬುದು ಪ್ರಶ್ನಾರ್ಹ. ಕನ್ನಡ ಕಾವಲು ಸಮಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಂಸ್ಥೆಗಳಲ್ಲಿ ಮೌನವಾಗಿದೆ ಏಕೆ? ನಮ್ಮ ನೆರೆಯ ರಾಜ್ಯಗಳಲ್ಲಿ ಇಂತಹ ದುಸ್ಥಿತಿಯಿಲ್ಲ ಕನ್ನಡ ಭಾಷೆಗೆ ಮಾತ್ರ ಹೀಗೇಕೆ? ಕನ್ನಡ ಮಾಧ್ಯಮ ಶಾಲೆಗಳಲ್ಲಿ ಹಲವು ಉಚಿತ ಸೌಲಭ್ಯಗಳು ಇದ್ದರು ಸರ್ಕಾರಿಶಾಲೆಗಳು ಏಕೆ ಜನಪ್ರಿಯತೆ ಕಳೆದುಕೊಳ್ಳುತ್ತಿವೆ? ಏಂಬುದನ್ನು ಶಿಕ್ಷಣ ಇಲಾಖೆ, ಶಿಕ್ಷಣ ಸಚಿವರು ಗಮನಿಸಬೇಕು.

ಕನ್ನಡದಲ್ಲಿ ವಿಜ್ಞಾನ ವಿಷಯಗಳ ಬೋಧನೆ ಸಾಧ್ಯವಿಲ್ಲವೆನ್ನುತ್ತಾರೆ. ಆದರೇ ಡಾ.ಸಿ ಎನ್ ಆರ್ ರಾವ್ ರಂತಹ ರಂತಹ ವಿಜ್ಞಾನಿಗಳೇ ಸಾಧ್ಯವಿದೆ ಎನ್ನುವಾಗ ಇವರ ಮಾತುಗಳು ಹಾಸ್ಯಾಸ್ಪದವೆನ್ನಿಸುತ್ತದೆ. ನಮಗೀಗ ಬೇಕಾಗಿರುವುದು ನಮಗೀಗ ಬೇಕಾಗಿರುವುದು ವಿದೇಶದಲ್ಲಿ ದುಡಿಯುವ ಯಂತ್ರ ಪದವೀಧರರಲ್ಲ, ನಮ್ಮ ಸಾಂಪ್ರಾದಾಯಿಕ ಕಲೆ, ಸಾಂಪ್ರಾದಾಯಿಕ ಕಲೆ, ಕಸುಬುಗಳು, ಲೋಕಜ್ಞಾನಗಳು ಮರೆಯಾಗುತ್ತಿವೆ. ಗ್ರಾಮೀಣ ಪ್ರದೇಶಗಳು ತಮ್ಮ ಚಹರೆಗಳನ್ನು

Journal of Research and Development
A Multidisciplinary International Level Referred and Double Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(A)| April-2026

ತಮ್ಮ ಚಹರೆಗಳನ್ನು ಕಳೆದುಕೊಂಡು ಗ್ಲೋಬೀಕೃತ ದುನಿಯಾದ ಸಮವಸ್ತ್ರಗಳಾಗುತ್ತಿವೆ. ನಮ್ಮ ಭಾಷೆಗಳ ಮೇಲೆ ಭಾಷೆಗಳ ಮೇಲೆ ನಿರಂತರವಾಗಿ ದಾಳಿ ನಡೆಯುತ್ತಿದೆ. ಇಂಗ್ಲೀಷ್ ಹುಚ್ಚಿಗೆ ಒಂದು ಪರಿಹಾರವನ್ನು ನಾವು ಕಂಡುಕೊಳ್ಳಬೇಕಿದೆ.

ಕನ್ನಡ ಸ್ಥಿತಿಗತಿ:

"ಕನ್ನಡಕ್ಕೆ ಹೋರಾಡು ಕನ್ನಡದ ಕಂದ, ಕನ್ನಡ ಕಾಪಾಡು ನನ್ನ ಆನಂದ, ಜೋಗುಳದ ಹರಕೆಯಿದು ಮರೆಯದಿರು ಚಿನ್ನ ಅಯ್ಯೋ ಮರೆತೆಯಾದರೆ ನೀನು ಮರೆತಂತೆ ನನ್ನ" ಎಂಬ ಕುವೆಂಪು ನುಡಿಯನ್ನು ಕನ್ನಡಿಗರು ಮರೆತಿದ್ದಾರೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಕನ್ನಡಿಗರು ಕರ್ನಾಟಕದ ಜನರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಕನ್ನಡಕ್ಕಿಂತ ಇಂಗ್ಲೀಷನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಅಂಚೆ ಕಛೇರಿ, ಬ್ಯಾಂಕ್ಗಳು, ಬಸ್ ನಿಲ್ದಾಣ, ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ಇವುಗಳ ಸೇವ ವ್ಯವಸ್ಥೆಯಲ್ಲಿ ಕನ್ನಡ ಭಾಷೆಗೆ ತೃತೀಯ ಸ್ಥಾನ, ಇಂಗ್ಲೀಷ್ಗೆ ಪ್ರಥಮ ಸ್ಥಾನ. ಭಾಷೆ ಬದುಕಿನ ಕನ್ನಡಿ. ಆದರೆ ಸದ್ಯ ಕನ್ನಡದ ಸ್ಥಿತಿ ನೋಡಿದರೆ ಕನ್ನಡಿ ಒಡೆದಂತಿದೆ. ಇಂತಹ ಪರಿಸ್ಥಿತಿಗೆ ಕನ್ನಡಿಗರು ಬೇರೆ ಯಾರನ್ನೂ ದೂಷಿಸುವಂತಿಲ್ಲ ಕನ್ನಡಿಗರು ಮೊದಲು ತಮ್ಮ ದೈನಂದಿನ ವ್ಯವಹಾರದಲ್ಲಿ ಕನ್ನಡವನ್ನೇ ಬಳಸಬೇಕು.

ಚೀನಾ, ಜಪಾನ್, ರಷ್ಯಾ ಜರ್ಮನಿ ಇನ್ನೂ ಕೆಲವು ದೇಶಗಳಲ್ಲಿ ಇಂದಿಗೂ ಜನರು ತಮ್ಮ ದೇಶದ ಪ್ರಾದೇಶಿಕ ಭಾಷೆಗಳನ್ನೇ ತಮ್ಮ ದೈನಂದಿನ ವ್ಯವಹಾರದಲ್ಲಿ ಬಳಸುತ್ತಾರೆ ಇದು ನಮ್ಮ ಮಾದರಿ. ರಾಜ್ಯ ಸರ್ಕಾರ ಕನ್ನಡ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು. ಗಣಕಯಂತ್ರ ಅಂತರ್ಜಾಲ ಹಾಗೂ ಎಲ್ಲಾ ಬಗೆಯ ವೈಜ್ಞಾನಿಕ ಮಾಧ್ಯಮಗಳಲ್ಲೂ ಕನ್ನಡವೇ ಹರಿದಾಡಬೇಕು. ಕನ್ನಡ ಪತ್ರಿಕೆಗಳನ್ನು ಚಲನಚಿತ್ರಗಳನ್ನು ನಾಟಕಗಳನ್ನು ದೂರದರ್ಶನ ಖಾಸಗಿ ಚಾನೆಲ್ಗಳನ್ನು ಬೆಂಬಲಿಸಬೇಕು. ಅಂಗಡಿ ಹಾಗೂ ಯಾವುದೇ ವಾಣಿಜ್ಯ ಕನ್ನಡದ ವ್ಯವಹಾರದ ಕಛೇರಿ, ಸಂಸ್ಥೆ ಕಟ್ಟಡಗಳ ಮುಂದೆ ಸಾರ್ವಜನಿಕ ವಹಿವಾಟು ನಡೆಯುವ ಕಡೆ ಕನ್ನಡ ಫಲಕಗಳು ಎದ್ದು ಕಾಣುವ ಹಾಗೆ ಪ್ರದರ್ಶಿಸಬೇಕು. ಇದು ಕಡ್ಡಾಯವಾಗಲೇ ಬೇಕು. ಇಲ್ಲದೆ ಹೋದರೆ ದುಬಾರಿ ದಂಡ ಕೊಡುವಂತೆ ಕಾನೂನನ್ನು ಅನುಷ್ಠಾನಕ್ಕೆ ತರಬೇಕು. ಇದ್ದರಿಂದ ಕನ್ನಡ ಎಲ್ಲಡೆ ರಾರಾಜಿಸುತ್ತದೆ. ಈ ಅಚಲ ಅಭಿಮಾನ ಪ್ರತಿಯೊಬ್ಬ ಕನ್ನಡಿಗನಲ್ಲಿ ಕರ್ನಾಟಕದಲ್ಲಿ ವಾಸಿಸುವವರಲ್ಲಿ ಇರಬೇಕು.

ಸಮೂಹ ಮಾಧ್ಯಮಗಳಲ್ಲಿ ಕನ್ನಡದ ಸ್ಥಿತಿಗತಿ:

ನಮ್ಮ ಕನ್ನಡದ ಖಾಸಗಿ ಚಾನೆಲ್ಗಳಲ್ಲಿ ಬಹುತೇಕ ನಿರೂಪಕರು ಕನ್ನಡವನ್ನು ಕಂಗ್ಲೀಷ್ ಮಾಡಿದ್ದಾರೆ. ಧಾರಾವಾಹಿ, ಸಂದರ್ಶನ, ವಿಶೇಷ ಕಾರ್ಯಕ್ರಮ, ವಾರ್ತೆಗಳು ಇನ್ನಾವುದೇ ಕಾರ್ಯಕ್ರಮದಲ್ಲಿ ಕನ್ನಡಕ್ಕಿಂತ ಕಂಗ್ಲೀಷ್ ಭಾಷೆಯನ್ನೇ ಹೆಚ್ಚಾಗಿ ಬಳಸುತ್ತಾರೆ. ಕನ್ನಡದ ಖಾಸಗಿ ವಾಹಿನಿಗಳ ಕಾರ್ಯಕ್ರಮಗಳ ಮುಖ್ಯಸ್ಥರು ಕನ್ನಡದ ಬಗ್ಗೆ ವಿಶೇಷ ಕಾಳಜಿವಹಿಸಬೇಕಾಗಿದೆ. ಹೊಸಬರ ಬಾಯಲ್ಲಿ ಅಪಭ್ರಂಶಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಹಳಬರೆ ಹೊಸಬರನ್ನು ಶೃತಿ ಪಡಿಸಬೇಕಾದ ಅಗತ್ಯವಿದೆ.

ರಸ್ತೆ ಬದಿಯ ಜಾಹೀರಾತು ಹಾಗೂ ದೂರದರ್ಶನದಲ್ಲಿ ಪ್ರಸಾರವಾಗುವ ಜಾಹೀರಾತುಗಳಲ್ಲಿ ಶುದ್ಧ ಕನ್ನಡ ಬಳಕೆಯಾಗುವಂತೆ ಕಾನೂನು ಕ್ರಮಗಳಾಗಬೇಕು. ತಂತ್ರಜ್ಞಾನದ ಸಹಾಯದಿಂದ ಕನ್ನಡವನ್ನು ಬೆಳೆಸುವ ಕೆಲಸವನ್ನು ಕನ್ನಡಿಗರು, ಸರಕಾರ ಮಾಡಬೇಕು. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣರಿಗೆ ಕನ್ನಡದ ತಂತ್ರಜ್ಞಾನದ ಬಗ್ಗೆ ತಿಳಿಸುವ ಹಾಗೂ ಗ್ರಾಮೀಣರಿಗೂ ತಂತ್ರಜ್ಞಾನದ ಸೌಲಭ್ಯ ನೀಡುವ ಕ್ರಮ ಕೈಗೊಳ್ಳಬೇಕು. ಜನಸಾಮಾನ್ಯರಲ್ಲಿ ಕನ್ನಡವೆಂದರೆ ಒಂದು ಭಾಷೆ ಮಾತ್ರವಲ್ಲ ಕನ್ನಡ ನುಡಿ, ನಾಡು, ಜನಾಂಗ, ಸಂಸ್ಕೃತಿ ಎಲ್ಲವೂ ಅದರಲ್ಲಿ ಒಳಪಟ್ಟಿದೆ ಎಂಬ ಭಾವನೆಯನ್ನು ಬೆಳೆಸಬೇಕು. ಜಾಗತೀಕರಣ, ಕಂಪ್ಯೂಟರೀಕರಣ ನೆಪದಲ್ಲಿ ಕನ್ನಡವನ್ನು ಕಡೆಗಣಿಸುತ್ತಿರುವ ನಾವು ಕನ್ನಡವನ್ನು ಬೆಳೆಸುವ ಬಲಗೊಳಿಸುವ ಕೆಲಸಗಳನ್ನು ಕನ್ನಡದ ಹೃದಯದಿಂದ ಮಾಡಬೇಕು.

ಕನ್ನಡದಿಂದ ಈ ತಲೆಮಾರಿನವರು ದೂರವಾಗುತ್ತಿದ್ದಾರೆ ಎಂಬ ಸಂದೇಹ ನಮ್ಮನ್ನು ಕಾಡುತ್ತಿದೆ. ಯುವಜನತೆ ಕನ್ನಡದ ಬಗ್ಗೆ ವಿಶೇಷ ಒಲವು, ಪ್ರೀತಿ ಬೆಳೆಸಿಕೊಂಡರೆ ಕನ್ನಡ ಬಲಿಷ್ಠವಾಗುತ್ತದೆ. ಎಲ್ಲಿಯವರೆಗೆ ಅದು ಜನಜೀವನವನ್ನು ತುಂಬಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಕನ್ನಡದ ಉಳಿವಿನ ಮಾತು ಹಾಸ್ಯಾಸ್ಪದವೆನಿನಸಿಕೊಳ್ಳುತ್ತದೆ. ನಮ್ಮ ಮಕ್ಕಳನ್ನು ನಾವು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? ನಾವು ಯಾವ ಭಾಷೆಯ ಸಿನಿಮಾಗಳನ್ನು ನೋಡುತ್ತಿದ್ದೇವೆ? ನಮ್ಮ ಮನೆಯ ಮುಂದೆ ಯಾವ ಭಾಷೆಯ ಫಲಕಗಳಿವೆ? ನಾವು ಬ್ಯಾಂಕ್ ಗಳಿಗೆ ಚೆಕ್ ಬರೆಯುವುದು ಕನ್ನಡದಲ್ಲಿಯೇ? ನಮ್ಮ ಲೆಟರ್ ಹೆಡ್, ಲಗ್ನಪತ್ರಿಕೆಗಳು, ತಿಥಿಕಾರ್ಡ್ಗಳು ಅಚ್ಚಾಗುವುದು ಯಾವ ಭಾಷೆಯಲ್ಲಿ? ನಾವು ಬರೆಯುವ ಕಾಗದಪತ್ರಗಳಲ್ಲಿ ಕನ್ನಡದ ಪದಗಳು ಎಷ್ಟಿವೆ? ಇಂಥ ನೂರಾರು ಪ್ರಶ್ನೆಗಳನ್ನು ನಾವು ಈಗ ಕೇಳಿಕೊಳ್ಳಬೇಕಾಗಿದೆ. ಅವುಗಳ ಉತ್ತರ ನಮ್ಮನ್ನು ಚುಚ್ಚಿದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತನಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದರ್ಥ. ಕನ್ನಡದ ಉಳಿವು ಕನ್ನಡಿಗರಿಂದಲೇ ಆಗಬೇಕು.

ಕನ್ನಡದ ಹೊಸ ಸವಾಲುಗಳು:

Journal of Research and Development
A Multidisciplinary International Level Referred and Double Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(A)| April-2026

ಕನ್ನಡಕ್ಕೆ ಯಾವ ತೊ್ರಸಾವಿಲ್ಲ ಸವಾಲಿವೆ ಎಂದಿರುವ ಬರಗೂರು ರಾಮಚಂದ್ರಪ್ಪನವರ ಅನಿಸಿಕೆಯನ್ನು ಸರಕಾರ ಮತ್ತು ಕನ್ನಡಿಗರು ಗಂಭೀರವಾಗಿ ಗಮನಿಸಲಿ, ಸೂಕ್ತವಾಗಿ ಸ್ಪಂದಿಸಲಿ. ಯಾವಾಗ ಕನ್ನಡ ಅನ್ನದ ಭಾಷೆಯಾಗುವುದೋ, ಕನ್ನಡದಿಂದ ಬದುಕು ಹಸನಾಗುವುದೋ ಆಗ ಕನ್ನಡವನ್ನು ಯಾರೂ ನಿರ್ಲಕ್ಷಿಸುವುದಿಲ್ಲ. ಬೇರೆ ಬೇರೆ ಶತಮಾನಗಳಲ್ಲಿ ಬೇರೆ ಬೇರೆ ಸವಾಲುಗಳನ್ನು ಎದುರಿಸುತ್ತಾ ಬಂದಿರುವ ಕನ್ನಡಕ್ಕೆ ಸವಾಲುಗಳನ್ನು ಮೆಟ್ಟಿನಿಲ್ಲುವ, ಅರಗಿಸಿಕೊಳ್ಳುವ ಶಕ್ತಿ ಇದೆ. ಆಧುನಿಕ ಕಾಲದಲ್ಲಿ ಹೊಸ ತಂತ್ರಜ್ಞಾನಕ್ಕೆ ಸಂಬAಧಿಸಿದAತೆ ತಂತ್ರಾAಶ ಅಭಿವೃದ್ಧಿಪಡಿಸಬೇಕು. ಈ ದಿಕ್ಕಿನಲ್ಲಿ ಹೊಸ ಚಿಂತನೆಗಳು, ಪ್ರಯೋಗಗಳು ಆಗಬೇಕು. ಕನ್ನಡತನ ಎಂದರೆ ಅದರಲ್ಲಿ ನಾಡಿನ ಜನರ ಜೀವನ ವಿಧಾನ, ಸಂಸ್ಕೃತಿ ಎಲ್ಲವೂ ಮೇಳೈಸುತ್ತದೆ.

ಹಿಂದಿನ ಕನ್ನಡ ಸಿನಿಮಾಗಳಲ್ಲಿರುತ್ತಿದ್ದ ಕನ್ನಡದ ಸೊಗಡು, ಕನ್ನಡ ಸಂಸ್ಕೃತಿ ಇಂದಿನ ಕನ್ನಡ ಸಿನಿಮಾಗಳಲ್ಲಿ ಕಾಣುತ್ತಿಲ್ಲ ಆದರೆ ಕನ್ನಡ ರಂಗಭೂಮಿ ಇಂದಿಗೂ ಕನ್ನಡ ಉಳಿಸುವ ಬೆಳೆಸುವ ಕೆಲಸವನ್ನು ಸದ್ದಿಲ್ಲದೇ ಮಾಡುತ್ತಿದೆ. ಅಖಂಡ ಕರ್ನಾಟಕವೇನೋ ರಚನೆಯಾಗಿದೆ ಆದರೆ ಕನ್ನಡಿಗರ ಮನಸ್ಸು ಇನ್ನೂ ಒಂದಾಗಿಲ್ಲ. ಉತ್ತರಕರ್ನಾಟಕದ ಸಮಸ್ಯೆ ದಕ್ಷಿಣ ಕರ್ನಾಟಕದ ಸಮಸ್ಯೆಗಳು ಬೇರೆ ಬೇರೆ ಎನ್ನುವ ಮನೋಭಾವ ಬೆಳೆಸಿಕೊಂಡಿದ್ದೇವೆ. ಕನ್ನಡ ಉಳಿಸಬೇಕೆಂದರೆ ಅದನ್ನು ಬದುಕಿನ ಭಾಷೆಯನ್ನಾಗಿಸಬೇಕು. ಕನ್ನಡ ನಮಗೆ ಅನ್ನ ಅರಿವೆ, ಆಸರೆಗಳನ್ನು ಕೊಟ್ಟಿದೆ. ಇದನ್ನು ಮೀರಿ ಕನ್ನಡ ಬದುಕು ಕಟ್ಟಿಕೊಡುವ ಭಾಷೆಯಾಗಬೇಕು. ನಮ್ಮನ್ನು ನೀವು ಸಮರ್ಥವಾಗಿ ಬಳಸಿಕೊಳ್ಳಿ, ಬೆಳೆಸಿ. ನಿಮ್ಮ ಪಾಲಿಗೆ ನಾನು ಕಾಮಧೇನುವಾಗುತ್ತೇನೆ, ಕಲ್ಪವೃಕ್ಷವಾಗುತ್ತೇನೆ. ಹೇಗೆ ಬಳಸಿಕೊಳ್ಳುತ್ತೀರೋ ನೋಡುತ್ತೇನೆ ಎಂಬುದು ಕನ್ನಡದ ಸವಾಲು.

ಕನ್ನಡ ಭಾಷೆಗೆ ೨೦೦೦ ವಚನಗಳ ಇತಿಹಾಸವಿದೆ, ಶ್ರೀಮಂತ ಪರಂಪರೆಯಿದೆ. ನಮ್ಮ ಸಾಹಿತ್ಯ ಹುಟ್ಟಿ ಬೆಳೆದ ಕಾಲದಲ್ಲಿ ನಾವು ಕೊಂಡಾಡುವ ಇಂಗ್ಲೀಷ್ ಭಾಷೆ ಇನ್ನೂ ಕಾಡು ಭಾಷೆಯಾಗಿತ್ತು ನಾವೀಗ ಇಂಗ್ಲೀಷ್ ಮೋಹದ ಸುಳಿಯಲ್ಲಿ ಸಿಲುಕಿ ಸಿಕ್ಕಿಹಾಕಿಕೊಂಡು ತೊಳಲುತ್ತಿದ್ದೇವೆ ಮತ್ತು ಆ ತೊಳಲಾಟವನ್ನೇ ಸಂಭ್ರಮಿಸುತ್ತಿದ್ದೇವೆ.

ನಮ್ಮ ಮಾತೃಭಾಷೆಯೂ, ರಾಜ್ಯ ಭಾಷೆಯೂ ಆದ ಕನ್ನಡದ ಬಗೆಗೆ ಅಂಧಾಭಿಮಾನ, ದುರಭಿಮಾನ ಅನಗತ್ಯವಾದರೂ ನಿರಭಿಮಾನ ಮೆರೆಯುತ್ತಿರುವುದು ಬೇಸರದ ಸಂಗತಿ. ಕುವೆಂಪು ರವರು ಹೇಳಿರುವಂತೆ ಇಂಗ್ಲೀಷ್ ನಂತೆ ಕನ್ನಡದಲ್ಲೂ ಎಂತಹ ಗಹನವಾದ ವಿಷಯವನ್ನಾಗಲೀ, ಸೂಕ್ಷ್ಮವಾದ ಭಾವವನ್ನಾಗಲೀ, ಸರಳವಾಗಿಯೂ, ಸುಲಭವಾಗಿಯೂ, ಶಕ್ತಿಪೂರ್ಣವಾಗಿಯೂ ವಿವರಿಸಲು ಸಾಧ್ಯ ಕನ್ನಡಿಗರ ಸರ್ವತೋಮುಖವಾದ ಉಧ್ಧಾರ ಕನ್ನಡದಿಂದಲೇ ಸಾಧ್ಯ ಕನ್ನಡಿಗರಿಗೆ ಕನ್ನಡವೇ ಗತಿ.

ಉಪಸಂಹಾರ:

ಈಗ ಕನ್ನಡದಂತಹ ಪ್ರಾದೇಶಿಕ ಭಾಷೆಗಳ ಅಳಿವು, ಉಳಿವಿನ ಬಗ್ಗೆ ಹುಯಿಲೆದ್ದಿದೆ. ಆಧುನಿಕ ತಂತ್ರಜ್ಞಾನದ ಹುಚ್ಚು ಹೊಳೆಯಲ್ಲಿ ಅನೇಕ ಭಾಷೆಗಳು ಕೊಚ್ಚಿ ಹೋಗುತ್ತವೆನ್ನುವ ಆತಂಕ ಆಯಾಯ ಭಾಷಿಕರ ಮನದಲ್ಲಿ ಶಂಕೆಯ ಛಾಯೆಯನ್ನು ಮೂಡಿಸಿದೆ. ಕನ್ನಡದಂತಹ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿರುವ, ಸಮೃಧ್ಧ ನುಡಿಗಟ್ಟುಗಳಿಂದ ಕೂಡಿರುವ ಸುಂದರವಾದೊAದು ಭಾಷೆ ಅಳಿಯುವುದೆಂದರೆ ಅದರದೇ ಆದ ಸಂಸ್ಕೃತಿ, ಜಾನಪದ ವಿಶಿಷ್ಟತೆಗಳು, ನಂಬಿಕೆ, ಆಚರಣೆ, ಭಾಷಾಲಯ ಎಲ್ಲವೂ ಅಂದರೆ ಕೋಟ್ಯಾಂತರ ಜನಮಾನಸದ ಅನೇಕ ಮಜಲುಗಳು ನಾಶವಾದಂತೆಯೇ ಸರಿ. ಆದರೆ ಈ ಭಾಷಾ ನಾಶದ ಆತಂಕ, ಭಯ, ಗೊಂದಲ ಎಲ್ಲವೂ ನಿರಾಧಾರವೆನ್ನುವುದು ಅತ್ಯಂತ ಸಂತಸದ ಸಂಗತಿ. ಯಾವ ವಿದ್ಯುನ್ಮಾನ ಮಾಧ್ಯಮಗಳು ಪ್ರಾದೇಶಿಕ ಭಾಷೆಗಳನ್ನು ಕೊಲ್ಲುತ್ತವೆಂದು ಆತಂಕ ಪಡಲಾಗಿತ್ತೋ ಅವೇ ಮಾಧ್ಯಮಗಳು ಇಂದು ಪ್ರಾದೇಶಿಕ ಭಾಷೆಗಳಿಗೆ ಬಹು ಆಯಾಮಗಳನ್ನು ಒದಗಿಸಿ ವಿವಿಧ ರೀತಿಯಲ್ಲಿ ಬೆಳೆದು ವಿಸ್ತರಿಸಲು ಅವಕಾಶ ಕಲ್ಪಿಸುತ್ತಿರುವುದು ಸಂತಸದ ಸಂಗತಿ.

ಆದರೂ ನಿರ್ಭೀಢೆಯಿಂದ ಅಭಿವ್ಯಕ್ತಿಸಲು ಶಕ್ತಿಶಾಲಿ ಮಾಧ್ಯಮ ಮಾತೃಭಾಷೆ. ಅದು ಹೃದಯದ ಭಾಷೆ. ಒಂದು ಭಾಷೆ ಅಳಿವಿನಂಚಿಗೆ ಬಂದಿರುವುದೇ ಆ ಭಾಷೆಯನ್ನಾಡುವ ಜನರಿಗೆ ಅಪಮಾನದ ಸಂಗತಿ. ಅಂತಹುದರಲ್ಲಿ ಈಗಲೂ ಎಚ್ಚೆತ್ತುಕೊಳ್ಳುವ ಮನಸ್ಸಿಲ್ಲದೇ ನಿದ್ರಿಸಿರುವ ಕನ್ನಡಿಗರು ಎಚ್ಚೆತ್ತುಕೊಳ್ಳಲೇಬೇಕಾಗಿದೆ. ಮಾಧ್ಯಮಗಳು ಕನ್ನಡವನ್ನು ಬೆಳೆಸಲು ಪ್ರಯತ್ನಿಸುತ್ತಿವೆಯೆಂದ ಮಾತ್ರಕ್ಕೆ ಎಲ್ಲವೂ ಮುಗಿದಿದೆ ಎಂದಲ್ಲ. ಈ ನಿಟ್ಟಿನಲ್ಲಿ ಆಗಬೇಕಾದ ಕಾರ್ಯಗಳೆಷ್ಟೋ. ಆ ಕುರಿತು ಯೋಜನೆಗಳು ತಯಾರಾಗಬೇಕಿದೆ. ಒಟ್ಟಿನಲ್ಲಿ ಕನ್ನಡದ ಶತಮಾನಗಳ ಹಿಂದಿನ ಸಂಭ್ರಮವನ್ನು ಪುನರ್ ನಿರ್ಮಿಸಲು ಕನ್ನಡಿಗರು ಅಣಿಯಾಗಬೇಕಿದೆ.

**ಗ್ರಂಥ ಋಣ:**

೧ ಭಾಷಾ ಚಳುವಳಿಗಳು - ಡಾ ಸಿ ಆರ್ ಗೋಂವಿದರಾಜು
೨ ಕನ್ನಡ ಸಾಹಿತ್ಯ ಚರಿತ್ರೆ– ರಂ ಶ್ರೀ ಮುಗಳಿ
೩ ದಿನಪತ್ರಿಕೆಗಳ ಲೇಖನಗಳು
೪ ನಮ್ಮ ಸಂಸ್ಕೃತಿ ಕುವೆಂಪು ಭಾಷಾ ಪ್ರಾಧಿಕಾರ ಮತ್ತು ಭಾರತೀಯ ವಿದ್ಯಾಭವನ, ಮೈಸೂರು.